# ರಾಷ್ಟ್ರೀಯ ಸೇವಾ ಯೋಜನೆ

ಸಂಖ್ಯೆ:ರಾಸೇಯೋ:ಪಪೂಶಿಇ:ವಿನಿ:93/2015-16

ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
18 ನೇ ಕ್ರಾಸ್, ಮಲ್ಲೇಶ್ವರಂ,
ಬೆಂಗಳೂರು-560012
ದಿನಾಂಕ: 12-01-2016

ಗೆ,

ಪ್ರಾಂಶುಪಾಲರು

-------------

-------------

ಮಾನ್ಯರೆ,

ವಿಷಯ:- ದಿನಾಂಕ: 19-01-2016 ರಂದು ಬೆಂಗಳೂರಿನ ನಡೆಯುಲಿರುವ "ರಾಜ್ಯ ಮಟ್ಟದ ವಿವೇಕಾನಂದ ಜಯಂತಿ" ಕಾರ್ಯಕ್ರಮಕ್ಕೆ ಎನ್.ಎಸ್.ಎಸ್. ವಿದ್ಯಾರ್ಥಿಗಳನ್ನು ನಿಯೋಜಿಸುವ ಬಗ್ಗೆ.

ಉಲ್ಲೇಖ: 1) ಸರ್ಕಾರಿ ಆದೇಶ ಸಂಖ್ಯೆ: ಇಡಿ 264 ಯುಬಿಹೆಚ್ 2015 ಬೆಂಗಳೂರು ದಿ: 02-01-2016
2) ಸಂಖ್ಯೆ:ಯುಸೇಇ/ರಾಸೇಯೋ/ಸಭೆ/2015-16/210/ದಿ: 11-01-16.

ಮೇಲ್ಕಂಡ ವಿಷಯ ಉಲ್ಲೇಖಕ್ಕೆ ಸಂಬಂಧಿಸಿದಂತೆ, ದಿನಾಂಕ 19-01-2016 ರಂದು ಕಂಠೀರವ ಕ್ರೀಡಾ ಸಭಾಂಗಣ, ಸಂಪಂಗಿ ರಾಮ ನಗರ ಬೆಂಗಳೂರು. ಉನ್ನತ ಶಿಕ್ಷಣ ಇಲಾಖೆ ಹಾಗೂ ವಿವಿಧ ಇಲಾಖೆ, ಕ್ರೀಡಾ ಇಲಾಖೆ, ವತಿಯಿಂದ ರಾಜ್ಯ ಮಟ್ಟದ ವಿವೇಕಾನಂದ ಜಯಂತಿ ಕಾರ್ಯಕ್ರಮ ಏರ್ಪಡಿಸಲಾಗಿದೆ. ಸದರಿಯವರು ದಿನಾಂಕ 19-01-2016 ರಂದು ಬೆಳಗ್ಗೆ 9.30ಕ್ಕೆ ಕಂಠೀರವ ಕ್ರೀಡಾಂಗಣದಲ್ಲಿ ಹಾಜರಿರಲು ಸೂಚಿಸಿ ತಮ್ಮ ಕಾಲೇಜಿನಿಂದ 100 ಎನ್.ಎಸ್.ಎಸ್. ಸ್ವಯಂ ಸೇವಕರನ್ನು ನಿಯೋಜನೆ ಮಾಡಲು ಕೋರಿದೆ.

ಸ್ವಯಂ ಸೇವಕರಿಗೆ ಭೋಜನ ವ್ಯವಸ್ಥೆ ಸಂಘಟಕರು ಏರ್ಪಡಿಸಲಾಗಿದೆ. ಮತ್ತು ಹೋಗಿ ಬರುವ ಪ್ರಯಾಣದ ಭತ್ಯೆಯನ್ನು ಎನ್.ಎಸ್.ಎಸ್. ದೈನಂದಿನ ಚಟುವಟಿಕೆಗಳ ಅನುದಾನದಲ್ಲಿ ಭರಿಸುವುದು.

ಸದರಿ ಕಾರ್ಯಕ್ರಮದಲ್ಲಿ ಭಾಗವಹಿಸುವ ಎನ್.ಎಸ್.ಎಸ್. ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರವನ್ನು ವಿತರಿಸಲಾಗುವುದು.

ಮೇಲಿನ ಸಂಖ್ಯೆಯ ಸ್ವಯಂ ಸೇವಕರು ದಿನಾಂಕ 19-01-2016 ರಂದು ಬೆಳಗ್ಗೆ 9.30 ರೊಳಗೆ ಕಂಠೀರವ ಕ್ರೀಡಾ ಸಭಾಂಗಣದಲ್ಲಿ ಹಾಜರಿರಲು ಕೋರಲಾಗಿದೆ. ಈ ಬಗ್ಗೆ ಎನ್.ಎಸ್.ಎಸ್. ಪದವಿ ಪೂರ್ವ ಶಿಕ್ಷಣ ಇಲಾಖೆಗೆ ರಾಷ್ಟ್ರೀಯ ಸೇವಾ ಯೋಜನೆಯ ಸಂಯೋಜನಾಧಿಕಾರಿಗಳಾದ ಶ್ರೀಮತಿ ಪಿ.ಆರ್. ಗಾಯಿತ್ರಿ ರೆಡ್ಡಿ ಇವರ ಮೊಬೈಲ್ ಸಂಖ್ಯೆ 9845298166 ಇವರನ್ನು ಸಂಪರ್ಕಿಸಬಹುದು.

ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರು ಕಡ್ಡಾಯವಾಗಿ ವಿದ್ಯಾರ್ಥಿಗಳನ್ನು ನಿಯೋಜಿಸಲು ತಿಳಿಸಿದೆ.

ವಿ.ಸೂ: ಬೆಂಗಳೂರು ನಗರದ ಕಾಲೇಜುಗಳು ಮಾತ್ರ

Gayathri Reddy P.R

ಎನ್.ಎಸ್.ಎಸ್. ಸಂಯೋಜನಾಧಿಕಾರಿಗಳು
ಪದವಿ ಪೂರ್ವ ಶಿಕ್ಷಣ ಇಲಾಖೆ

ಪ್ರತಿ:

1. ಸಹಾಯಕ ನಿರ್ದೇಶಕರು ಇ-ಆಡಳಿತ ಇವರಿಗೆ ಇಲಾಖೆಯ ಅಂತರ್ಜಾಲದಲ್ಲಿ ಪ್ರಕಟಿಸಲು
2. ಕಛೇರಿ ಪತ್ರಿ.